ಹೋರಾಡಿ ನನ್ನನ್ನು ಉಳಿಸಿಕೊಂಡರು. 'ನನ್ನನ್ನು ಉಳಿಸಿದ್ದು ಯಾಕೇಂತ' ಹುಚ್ಚಿಯಂತೆ ಅವರ ಮೇಲೆ ಹಾರಾಡಿದೆ. ಮನದಣಿಯೆ ಬೈದೆ. ಎಲ್ಲದಕ್ಕೂ ಅವರು ಮೌನವಾಗಿದ್ದರು..."

ನೆನಪಿನಿಂದ ಬಳಲಿದವಳಂತೆ ಒಂದು ಕ್ಷಣ ನಿಲ್ಲಿಸಿದಳು.

"ಹೂಂ... ಹೇಳಿ..."

"ಆಮೇಲೆ ಎಲ್ಲಾ ನಾಟಕದ ತರಹಾ ನಡೆದುಹೋಯ್ತು, ಇವರು ನಾಗರಾಜನ ಮದುವೆಗೆ ಹೋಗಲಿಲ್ಲ. ತನ್ನಣ್ಣ ಇಂಥ ನೀಚ ಕೆಲಸ ಮಾಡಿ ಅಲ್ಲಿ ಸಭ್ಯನಂತೆ ಸೋಗು ಹಾಕಿ ಮತ್ತೊಂದು ಹೆಣ್ಣಿನ ಕೊಲೆ ಮಾಡ್ತಾ ಇದ್ದಾನೇಂತ ಅಸಹ್ಯಪಟ್ಟುಕೊಂಡರು. ನಾನು ಆಸ್ಪತ್ರೆಯಲ್ಲಿರುವವರೆಗೂ ನನ್ನ ಮನೆಯವರಾರೂ ಬರಲಿಲ್ಲ... ಮುಂದೆಯೂ ಬರಲಿಲ್ಲ..."

"ಆಮೇಲೆ?"

"ಚೇತರಿಸಿಕೊಳ್ಳುತ್ತಿದ್ದಂತೆಯೇ ನನಗೆ ಮತ್ತೊಂದು ಷಾಕ್ ಕಾದಿತ್ತು, ದಿವಾಕರ್ ಅವರ ತಂದೆ ಮತ್ತು ಮನೆಯವರ ಬಳಿ ವಿಷಯದ ವಿವರ ತಿಳಿಸಿ, ನನ್ನನ್ನು ಮದುವೆಯಾಗುವ ಆಸೆಯನ್ನು ವ್ಯಕ್ತಪಡಿಸಿದರು. ನಾನು ಖಡಾಖಂಡಿತವಾಗಿ ನಿರಾಕರಿಸಿದೆ. ಆದರೆ ಅವರ ದೃಢ ನಿರ್ಧಾರ, ನನ್ನ ಒಂಟಿತನದ ನೋವು, ಹತಾಶೆ, ನನ್ನನ್ನು ಸೋಲುವಂತೆ ಮಾಡಿತು.

'ನನ್ನನ್ನು ನಂಬು ಗೀತಾ, ನನ್ನಣ್ಣನ ಹಾಗೆ ನಿನ್ನನ್ನು ನಡು ಬೀದಿಯಲ್ಲಿ ಕೈ ಬಿಡೋಲ್ಲ. ನಿನಗಾಗಿ ಮನೆಯವರ ವಿರೋಧ ಕಟ್ಟಿಕೊಂಡು ಬಂದಿದ್ದೀನಿ... 'ಅತ್ತಿಗೆಯ ತರಹಾ ಇದ್ದೋಳನ್ನ ಮದ್ವೆಯಾಗ್ತೀಯಾ?' ಎಂದು 'ಥೂ' ಎಂದ ಅಣ್ಣ... ನಂಗೂ ರೇಗಿತು. 'ನೀನು ಒಮ್ಮೆಯಾದರೂ ಅವಳನ್ನು ಹೆಂಡತೀಂತ ಅಂದುಕೊಂಡಿದ್ದರೆ ನಾನು ಅತ್ತಿಗೇಂತ ಕಾಲು ಹಿಡೀತಿದ್ದೆ. ನನಗೂ ನೈತಿಕತೆ ಅರಿವು ಇದೆ. ವಿದ್ಯಾವಂತ ಒಂಟಿ ಹೆಣ್ಣನ್ನು ಬೀದಿಪಾಲು ಮಾಡಿ ಬಂದು ಇಲ್ಲಿ ಗೃಹಸ್ಥನಂತೆ ಬೀಗುತ್ತಿದ್ದೀಯಲ್ಲ ನಿಂಗೆ ನಾಚಿಕೆಯಾಗಬೇಕು' ಎಂದೆ.

ಹೀಗೆ ಮಾತಿಗೆ ಮಾತು ಬೆಳೆಯಿತು. ಕೊನೆಗೆ ನಾನೇ ನಿರ್ಧಾರ ತೆಗೆದುಕೊಂಡು ನಿನ್ನ ಬಳಿಗೆ ಬಂದೆ. 'ಅವನು ಕೊಂದು ಹೋದ ನಿನ್ನನ್ನು ನಾನು ಬದುಕಿಸಿಕೊಂಡಿದ್ದೀನಿ' ಸಂಬಂಧಗಳು ನಾವು ಮಾಡಿಕೊಂಡ ಹಾಗೆ, ನೀನು ನನಗಾಗಿ ಬದುಕಲೇಬೇಕು... ಕೆಲವೇ ದಿನಗಳ ನಿನ್ನ ಒಡನಾಟದಲ್ಲಿ ನನಗೆ ನೀನು ತುಂಬಾ ಬೇಕು ಎನ್ನಿಸಿ ಬಿಟ್ಟಿದೆ... ನಿರಾಕರಿಸ ಬೇಡಾ ಗೀತಾ...' ಎಂದರು. ಅವರ ಪ್ರೀತಿ, ದೃಢತೆ ನನ್ನನ್ನು ಬದುಕಿಸಿತು. ಸಮಾಜದ ಕಣ್ಣಲ್ಲಿ ಗೃಹಿಣಿಯನ್ನಾಗಿ ಮಾಡಿತು. ಮುದ್ದಾದ ಮಗುವನ್ನು ನೀಡಿತು.... ಮತ್ತೆಂದೂ ನನಗೆ ಅಭದ್ರತೆಯ ನೋವಾಗಲಿ, ಒಂಟಿತನದ ನೆನಪಾಗಲಿ ಆಗಲೇಯಿಲ್ಲ. ನಾನು ತುಂಬಾ ಸುಖವಾಗಿದ್ದೇನೆ ಡಾಕ್ಟ್ರೆ..."

"ಮತ್ತೆ... ಮಗೂನ ಕೊಲ್ಲೋಕೆ ಯಾಕೆ ಹೋಗ್ತೀಯಾ? ನಿನ್ನ ಗಂಡನ ಪಕ್ಕದಿಂದ ಎದ್ದು ಹೊರಗೆ ಯಾಕೆ ಹೋಗ್ತೀಯಾ?..."

ಇದ್ದಕ್ಕಿದ್ದ ಹಾಗೆ ಗೀತಾ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿಬಿಟ್ಟಳು.

"ಯಾರ ಮೇಲಿನ ದ್ವೇಷಕ್ಕೂ ಹಾಗೆ ಮಾಡ್ತಾ ಇಲ್ಲ. ದೇವರಂಥ ಗಂಡನಿಗೆ ನನ್ನಂತಹವಳು ಅರ್ಹಳೆ?... ಇಂಥಾ ಮುದ್ದಾದ ಮಗುವಿಗೆ ಪತಿತೆಯಾದ ನಾನು ತಾಯಿಯೇ... ಅನ್ನಿಸಿ ನನ್ನ ಬಗ್ಗೆ ನನಗೆ ಜಿಗುಪ್ಸೆ ಬರತೊಡಗಿಬಿಟ್ಟಿದೆ... ನನ್ನನ್ನು ಕೊಂದುಕೊಳ್ಳಲು ಇಷ್ಟವಿಲ್ಲ... ಡಾಕ್ಟರ್, ನಂಗೆ ಬದುಕೋಕೆ ತುಂಬಾ ಆಸೆಯಿದೆ. ಇವರೇ ಜನ್ಮ ಜನ್ಮಾಂತರಕ್ಕೂ ನನ್ನವರಾಗಿ ಇರ್ಬೇಕೂಂತ ಅನೇಕ ಪೂಜೆಗಳನ್ನು ಮಾಡ್ತಾ ಇದ್ದೀನಿ..."

"ಈಗ ನಾನೊಂದು ಮಾತು ಹೇಳ್ತೀನಿ ಕೇಳ್ತೀಯಾ?..."